ಕರ್ನಾಟಕ ಅರಣ್ಯ ಇಲಾಖೆ

ಕ್ರಸಂ:ಬಿ2/ಜಿಎಫ್‌ಎಲ್/ಪ್ರಸ್ತಾವನೆ/0.6545/ಸಿಆರ್–  /2021–22 | 1119

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬಾಗಲಕೋಟ ವಿಭಾಗ, ಬಾಗಲಕೋಟ
ದಿನಾಂಕ: 20/09/2021.

ಇವರಿಗೆ,

ಮೆ: ಕಾರ್ತಿಕ ಅಗ್ರೊ ಇಂಡಸ್ಟ್ರೀಜ್ (ಪ್ರೈ.ಲಿ)
ಹೂಲಗೇರಿ, ತಾ: ಬದಾಮಿ
ಜಿ: ಬಾಗಲಕೋಟ.

ಮಾನ್ಯರೆ,

ವಿಷಯ: Diversion of 0.6545 Ha. of Forest land in Hoolageri Village, Badami taluk, Bagalkote District for construction of approach road to Karthik Agro Industries Pvt. Ltd (Proposal No. FP/KA/Road/144076/2021)

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಕೆಎಐಪಿಎಲ್/ಎಫ್‌ಸಿ/2021–22/03 ದಿನಾಂಕ: 13–09–2021.

– **** –

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೀವು ಅರಣ್ಯ (ಸಂರಕ್ಷಣಾ) ಕಾಯ್ದೆ 1980ರಡಿ ಅರಣ್ಯ ಜಮೀನು ಬಿಡುಗಡೆ ಮಾಡಲು ಕೋರಿ ಆನ್‌ಲೈನ್ ಮೂಲಕ ಸಲ್ಲಿಸಲಾದ ಪ್ರಸ್ತಾವನೆಯ ಹಾರ್ಡ ಕಾಪಿಗಳನ್ನು ಈ ಕಚೇರಿಗೆ ಸಲ್ಲಿಸಿದ್ದು, ಸದರಿ ಹಾರ್ಡ ಕಾಪಿಗಳಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರಿಂದ ಪಡೆದ ರಸ್ತೆ ನಿರ್ಮಾಣ ಮಾಡಲು ಪರ್ಯಾಯ ಅರಣ್ಯೇತರ ಪ್ರದೇಶವು ಲಭ್ಯವಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಲಗತ್ತಿಸಿರುವುದಿಲ್ಲ. ಮತ್ತು ಆನ್‌ಲೈನ್‌ನಲ್ಲಿ ಬಿಡುಗಡೆ ಮಾಡಲು ಕೋರಿರುವ ಅರಣ್ಯ ಪ್ರದೇಶಕ್ಕೂ ಹಾಗೂ ಕ್ಷೇತ್ರ ತಪಾಸಣೆ ಸಂದರ್ಭದಲ್ಲಿ ಕಂಡು ಬಂದಿರುವ ಪ್ರದೇಶಕ್ಕೂ ವ್ಯತ್ಯಾಸ ಕಂಡುಬಂದಿರುತ್ತದೆ. ಕಾರಣ ಬಿಡುಗಡೆ ಮಾಡಬೇಕಾದ ಅರಣ್ಯ ಪ್ರದೇಶವನ್ನು ನಿಖರವಾಗಿ ಅಳತೆ ಮಾಡಿ ಸರಿಪಡಿಸಲು ತಿಳಿಸಿ ಆನ್‌ಲೈನ್ ಮೂಲಕ ಈ ಕಚೇರಿಗೆ ಸ್ವೀಕೃತವಾಗಿರುವ ನಿಮ್ಮ ಪ್ರಸ್ತಾವನೆಯನ್ನು ಹಿಂತಿರುಗಿಸಲಾಗಿದೆ.

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟ ವಿಭಾಗ, ಬಾಗಲಕೋಟ